ಸಿ. ಸಿ. 2207/2024 PW-1

ಬಸಮ್ಮ ಗಂಡ ದೇವಪ್ಪ

ದಿ.26-09-2025. ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಶ್ರೀ ಎಮ್.ಕೆ ವಕೀಲರಿಂದ :-**

ಆರೋಪಿಯ ಜೊತೆಗೆ ನಾನು ಒಬ್ಬಳೆ ಹಣಕಾಸಿನ ವ್ಯವಹಾರ ಮಾಡಿರುತ್ತೇನೆ. ನನ್ನ ಗಂಡನಿಗೆ ಗೊತ್ತಿರುತ್ತದೆ ಆದರೆ ಹಣ ನನ್ನ ಗಂಡನದ್ದಲ್ಲ. ಹಣ ಕೊಡುವ ಸಂದರ್ಭದಲ್ಲಿ ನನ್ನ ಗಂಡ ದೇವಪ್ಪ ಮನೆಯಲ್ಲಿದ್ದ. ಗೋವಿಂದಪ್ಪ ಮತ್ತು ಶಿವಪುತ್ರಪ್ಪರವರು ಈ ಹಣದ ಬಗ್ಗೆ ಜವಾಬ್ದಾರಿ ತೆಗೆದುಕೊಂಡಿದ್ದರು. ಆರೋಪಿಗೆ ಇಬ್ಬರು ಮಕ್ಕಳಿರುತ್ತಾರೆ. ಒಬ್ಬ ಮಗ ಪ್ರವೀಣ ಇದ್ದು ನಾನು ನೋಡಿರುವುದಿಲ್ಲ. ತಿಪ್ಪಮ್ಮ ಎನ್ನುವವರು ನನ್ನ ಜೊತೆ ಹಟ್ಟಿ ಪಟ್ಟಣದ ಕಾಕಾನಗರದ ಅಂಗನವಾಡಿ ಟೀಚರ್ ಇದ್ದಾರೆ ಎಂದರೆ ಸರಿ. ತಿಪ್ಪಮ್ಮಳ ಜೊತೆ ಕೆಲಸ ಮಾಡಿರುತ್ತೇನೆ. ತಿಪ್ಪಮ್ಮಳು ಚೀಟಿ ಹಾಕಿದ ಸಂದರ್ಭದಲ್ಲಿ ನಾನು ಒಂದು ಚೀಟಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಮಗ ಪ್ರವೀಣ ಒಂದುಬಾರಿ ರೂ.80,000/- ಎರಡುಬಾರಿ ರೂ.50,000/- ದಂತೆ ಗೋವಿಂದಪ್ಪನ ಅಕೌಂಟಿಗೆ ಪೋನ್-ಪೇ ಮೂಲಕ ಹಾಕಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಆರೋಪಿ ಜೊತೆ ಹಣಕಾಸಿನ ವ್ಯವಹಾರ ಮಾಡಿದ್ದನ್ನು ಹೊರತು ಪಡಿಸಿ ನನ್ನ ಗಂಡ ದೇವಪ್ಪ ಆರೋಪಿಯ ಜೊತೆ ಹಣಕಾಸಿನ ವ್ಯವಹಾರ ಮಾಡಿರುತ್ತಾರೆ. ಎಷ್ಟು ವರ್ಷದ ಹಿಂದೆ ಎಷ್ಟು ಹಣದ ವ್ಯವಹಾರ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ನಾನು ತಿಪ್ಪಮ್ಮಳ ಜೊತೆ ಚೀಟಿ ವ್ಯವಹಾರ ಮಾಡಿದ್ದು ಅದರ ರೂ.35,000/- ಹಣವನ್ನು ಆರೋಪಿಯ ಮಗ ತಿಪ್ಪಮ್ಮಳ ಅಕೌಂಟಿಗೆ ಹಾಕಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಆರೋಪಿತಳು ನನ್ನ ಗಂಡನ ಪೋನ್ ನಂ.9448803550 ನಂಬರಿಗೆ ಪೋನ್-ಪೇ ಮೂಲಕ ದಿನಾಂಕ 07-04-2023 ರಂದು ರೂ.49,900/- ಗಳನ್ನು ಹಾಕಿರುತ್ತಾಳೆ ಎಂದರೆ ಸರಿ. ಒಂದು ಸಾರಿ ರೂ.40,000/-, ರೂ.50,000/-, ರೂ.10,000/-, ರೂ.40,000/-, ರೂ.10,000/-, ರೂ.30,000/- ಮತ್ತು ರೂ.15,000/- ಗಳನ್ನು ನನ್ನ ಗಂಡನ ಅಕೌಂಟಿಗೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಕೈಗಡ ಪತ್ರವನ್ನು ರೂ.11,50,000/- ಗಳಿಗೆ ಬರೆಯಿಸಿಕೊಂಡಿರುತ್ತೇನೆ. ಆ ಬಗ್ಗೆ ಪ್ರತ್ಯೇಕವಾಗಿ ನೋಟಿಸನ್ನು ಆರೋಪಿಗೆ ಕಳಿಸಿರುವುದಿಲ್ಲ. ಕೈಗಡ ಪತ್ರ ಹೊರತುಪಡಿಸಿ ಭದ್ರತೆಗಾಗಿ ಬೇರೆ ಯಾವುದೇ ದಾಖಲೆ ಪಡೆದಿರುವದಿಲ್ಲ. ಕೈಗಡ ಪತ್ರ ಬರೆಸಿಕೊಂಡು ನಂತರ ದಿನಾಂಕ 15-07-2024 ರಂದು ಚೆಕ್ಕು ಕೊಟ್ಟಿರುತ್ತಾರೆ. ಕೈಗಡ ಪತ್ರವನ್ನು ದಿನಾಂಕ 02-11-2022 ರಂದು ಬರೆಯಿಸಿಕೊಂಡಿರುತ್ತೇನೆ. ನಾವು ಕೈಡಗ ಪತ್ರವನ್ನು ರೂ.11,50,000/- ಗಳುಗೆ ಬರೆಯಿಸಿಕೊಂಡಿದ್ದು ಚೆಕ್ಕನ್ನು ನಾವು ರೂ.11,50,000/- ಗಳಿಗೆ ಚೆಕ್ಕು ಕೊಡುವಂತೆ ಕೇಳಿಲ್ಲ. ಆದರೆ ನನ್ನ ಹತ್ತಿರ ರೂ.9,00,000/- ಇದೆ ಎಂದು ಅಷ್ಟು ಮೊತ್ತಕ್ಕೆ ಚೆಕ್ಕು ಕೊಟ್ಟಿರುತ್ತಾರೆ.

3. ನಿ.ಪಿ-2 ಹಿಂಬರಹದಲ್ಲಿ ಆರೋಪಿಯ ಸಹಿಯು ವ್ಯತ್ಯಾಸ ಇದೆ ಎಂದು ಬರೆದಿದೆ ಎಂದರೆ ಸರಿ. ಸಹಿ ವ್ಯತ್ಯಾಸ ಇದೆ ಎಂದು ನನ್ನ ದೂರಿನಲ್ಲಿ ಬರೆಸಿರುತ್ತೇನೆ. ಆ ಬಗ್ಗೆ ಆರೋಪಿಯ ವಿರುದ್ದ ಕಾನೂನು ಕ್ರಮ ಜರುಗಿಸಿರುವುದಿಲ್ಲ. ಆದರೆ ನಾವು ವಕೀಲರ ಮೂಲಕ ನೋಟಿಸು ಕೊಟ್ಟಿರುತ್ತೇವೆ ಎನ್ನುತ್ತಾರೆ. ನಿ.ಪಿ-1 ರಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಆರೋಪಿತಳು ತನ್ನ ಸೇವಾ ಅವಧಿಯಲ್ಲಿ ಅಥವಾ ಬ್ಯಾಂಕಿನ ವ್ಯವಹಾರದಲ್ಲಿ ಈ ರೀತಿ ಸಹಿ ಮಾಡುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಸಹಿ ಅಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಸಹಿ/-

ಪ್ರಧಾನ ಸಿವಿಲ ನ್ಯಾಯಾಧೀಶರು &
ಜೆಎಂಎಫ್‌ಸಿ ಲಿಂಗಸುಗೂರು.